## ಪುರಂದರ ದರ್ಶನ

ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಚಂದನ ವಾಹಿನಿಯು 'ಶ್ರೀ ಪುರಂದರ ದರ್ಶನ' ಎಂಬ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ನೀಡಿತು. ಫೈನ್ ಆರ್ಟ್ಸ್ ಕೌನ್ಸಿಲ್, ಚಂದನ ವಾಹಿನಿ ಮತ್ತು ಆಕಾಶವಾಣಿ ಸಂಯುಕ್ತವಾಗಿ ಈ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ. ಸುಮಾರು 45 ಸಂಗೀತ ಕಲಾವಿದರು, ನೃತ್ಯಗಾರರು ಮತ್ತು ವಾದ್ಯಗಳನ್ನು ನುಡಿಸುವ ಕಲಾವಿದರು ಭಾಗವಹಿಸಿದ್ದರು. ಕರ್ನಾಟಕ ಸಂಗೀತ ಪಿತಾಮಹರೆಂದೇ ಪ್ರಸಿದ್ಧರಾದ ಪುರಂದರ ದಾಸರ ಪದಗಳನ್ನು ಮತ್ತು ಕೀರ್ತನೆಗಳನ್ನು ಹಾಡಿದರು. ವಿಶೇಷವೆಂದರೆ, ಕರ್ನಾಟಕ ಶೈಲಿಯಲ್ಲಿ ಮತ್ತು ಹಿಂದೂಸ್ತಾನಿ ಶೈಲಿಯಲ್ಲಿ ಗಾಯನ ಮಾಡಿದರು. ಪ್ರತಿಯೊಬ್ಬ ಕಲಾವಿದರು ಪ್ರಸ್ತುತಪಡಿಸಿದ ಒಂದೊಂದು ದಾಸರ ಪದಗಳು ಸಂಗೀತಾಸಕ್ತರಿಗೆ ಸಂಗೀತ ಸುಧೆಯನ್ನೇ ಹರಿಸುವಂತಿತ್ತು. ಇದುವರೆಗೂ ಹಿಂದೂಸ್ತಾನಿ ಶೈಲಿಯಲ್ಲಿ ಎಂ.ವೆಂಕಟೇಶ ಕುಮಾರ, ಜಯತೀರ್ಥ ಮೇವುಂಡಿ, ಸಂಗೀತಾ ಕಟ್ಟಿ ಪುರಂದರ ದಾಸರ ಪದಗಳನ್ನು ಪ್ರಸ್ತುತಪಡಿಸಿದ್ದರೆ, ಕರ್ನಾಟಕ ಸಂಗೀತದದ ಶೈಲಿಯಲ್ಲಿ ವಿದ್ಯಾ ಭೂಷಣ, ಆರ್. ಚಂದ್ರಿಕಾ, ಎಂ.ಜಿ. ವೆಂಕಟರಾಘವನ್, ಕಲಾವತಿ ಅವಧೂತ, ಎಚ್.ಕೆ. ನರಸಿಂಹಮೂರ್ತಿ, ಆರ್.ಕೆ. ಪದ್ಮನಾಭನ್, ಟಿ.ಎಸ್. ಸರಸ್ವತಿ ಮುಂತಾದವರು ಪುರಂದರ ದಾಸರ ಕೀರ್ತನೆಗಳನ್ನು ಹಾಡಿದ್ದಾರೆ. ಪ್ರವೀಣ ಗೋಡ್ಖಿಂಡಿ ಕೊಳಲುವಾದನದಲ್ಲಿ ದಾಸರ ಪದಗಳನ್ನು ಪ್ರಸ್ತುತಪಡಿಸಿದ್ದಾರೆ. ಇದೊಂದು ಭಾವ ಯಾನ ಕಾರ್ಯಕ್ರಮವೆಂದೇ ಹೇಳಬಹುದಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ವಾರದ ಪತ್ರ

## ಪ್ರೇಮಕವಿ ಸ್ಮರಣೆ

ಝೀ ಕನ್ನಡ ವಾಹಿನಿಯಲ್ಲಿ ರಾಜ್ಯೋತ್ಸವದ ಅಂಗವಾಗಿ ಡ್ರಾಮಾ ಜ್ಯೂನಿಯರ್ಸ್ ಮತ್ತು ಡಾನ್ಸ್ ಕರ್ನಾಟಕ ಡಾನ್ಸ್ ತಂಡದವರಿಂದ ಶಿವಮೊಗ್ಗೆಯಲ್ಲಿ ವಿಶಿಷ್ಟ ಕಾರ್ಯಕ್ರಮ ಜರಗಿತು. ಡ್ರಾಮಾ ಜ್ಯೂನಿಯರ್ಸ್ ತಂಡದ ಮಕ್ಕಳಿಂದ ಕನ್ನಡದ ಪ್ರೇಮ ಕವಿ ಎಂದೇ ಪ್ರಸಿದ್ಧರಾದ ಕೆ.ಎಸ್. ನರಸಿಂಹಸ್ವಾಮಿಯವರ ಬಡತನ ಬದುಕಿನ ಮನ ಮಿಡಿಯುವ ಚಿತ್ರಣವನ್ನು ನೀಡಿದರು. 1942ರಲ್ಲಿ ಪ್ರಕಟಿತ ಪ್ರೇಮ ಕವನಗಳ ಸಂಕಲನ 'ಮೈಸೂರು ಮಲ್ಲಿಗೆ' ಯಿಂದ ಹಲವು ಕವಿತೆಗಳನ್ನು ಆರಿಸಿಕೊಂಡು ಕವಿಯ ವೈಯಕ್ತಿಕ ಜೀವನದ ಪರಿಚಯ ಮಾಡುವ ಪ್ರಯತ್ನವನ್ನು ಮಕ್ಕಳು ಬಹಳ ಚೆನ್ನಾಗಿ ನಿರ್ವಹಿಸಿದರು. ಕವಿಯು ಅನುಭವಿಸುತ್ತಿದ್ದ ಬಾಳಿನ ದುಃಖ ದುಮ್ಮಾನಗಳ ಕರುಣಾಜನಕ ಜೀವನವನ್ನು ಕಣ್ಮುಂದೆ ತಂದು ನಿಲ್ಲಿಸಿ ಎಲ್ಲರ ಕಣ್ಣುಗಳು ತೇವಗೊಳಿಸಿದ್ದು ಬಾಲಕರ ಪ್ರತಿಭೆ ಮತ್ತು ಅದನ್ನು ಪ್ರಸ್ತುತಪಡಿಸಿದ ರೀತಿ ಕಾರಣ ಎಂದು ಹೇಳಬಹುದು. ಕವಿ ತನ್ನ ಕಷ್ಟಕರವಾದ ದುಃಖಮಯ ಜೀವನದ ಮಧ್ಯೆಯೂ ಒಲವಿನ ಸಂತೋಷ ಕೊಡುವ ಪ್ರೇಮಗೀತೆಗಳನ್ನು ನೀಡಿದ್ದು ಚಂದನವನ್ನು ತೇಯ್ದರೂ ಪರಿಮಳದ ಕಂಪನ್ನು ಸೂಸುವಂತೆ ಕವಿ ಒಲವಿನ ಪರಿಮಳವನ್ನೇ ಕನ್ನಡಿಗರಿಗೆ, ಕನ್ನಡ ಸಾಹಿತ್ಯಕ್ಕೆ ಹಂಚಿದ್ದಾರೆ.

—ಮೀನಾಕ್ಷಿ. ಕೆ. ರಾಮಗುಂಡಿ, ಬೈಲಹೊಂಗಲ

## ಕನ್ನಡಾಭಿಮಾನ

'ಬಿಗ್ ಬಾಸ್' ಕಾರ್ಯಕ್ರಮ ಆಸಕ್ತಿದಾಯಕವಾಗಿ ಮೂಡಿ ಬರುತ್ತಿದೆ. 'ಬಿಗ್ ಬಾಸ್' ಮನೆಯೊಳಗಿನ ಸ್ಪರ್ಧಿಗಳು ತಮ್ಮ ಸಂಭಾಷಣೆಯಲ್ಲಿ ಆಂಗ್ಲ ಭಾಷೆ ಬಳಸಿದರೆ, ಶಿಕ್ಷೆ ರೂಪದಲ್ಲಿ ದಂಡ ವಿಧಿಸುತ್ತಿರುವುದು ಅಭಿನಂದನೀಯ.

ಮನೆಯೊಳಗಿನ ಕನ್ನಡಾಭಿಮಾನವನ್ನೇ ಪ್ರತಿ ಶನಿವಾರ, ಭಾನುವಾರಗಳಂದು ನಟ ಸುದೀಪ್ ನಡೆಸಿಕೊಡುವ ವಾರಾಂತ್ಯದ ಸಂವಾದ ಕಾರ್ಯಕ್ರಮದ ವೇದಿಕೆಯ ಮೇಲೆ ಮತ್ತು 'ಬಿಗ್ ಬಾಸ್' ಮನೆಯಲ್ಲಿ ರಾರಾಜಿಸುತ್ತಿರುವ ಆಂಗ್ಲ ಪದಗಳೊಂದಿಗೆ ಕನ್ನಡ ಪದಗಳನ್ನೂ ಬಳಸಿದರೆ, 'ಬಿಗ್ ಬಾಸ್' ನಿರ್ಮಾಪಕರು ಮತ್ತಷ್ಟು ಅಭಿನಂದನೀಯರಾಗುತ್ತಾರೆ.

—ಹೆಚ್.ಎಂ. ಪ್ರೇಮ್‌ಕುಮಾರ್, ಬೆಂಗಳೂರು

## ಹಸುಗೂಸು ನಾಯಕ

ಝೀನಲ್ಲಿ ಪ್ರಸಾರವಾಗುವ 'ಜೋಡಿ ಹಕ್ಕಿ' ನಾಯಕನ ಪಾತ್ರಧಾರಿ ರಾಮುವಿಗೆ ಹಸುಗೂಸಿನ ಬುದ್ಧಿ. ಹನಿಮೂನ್, ಮೊದಲ ರಾತ್ರಿ ಎಂದರೆ ಏನು ಎಂದು ಅಮಾಯಕನಂತೆ ಕೇಳಿದಾಗ ಮುಸಿ ಮುಸಿ ನಗುವ ಮಕ್ಕಳು, ದೇಹ ಬೆಳೆದಂತೆ ಅಗತ್ಯಗಳು, ಭಾವನೆಗಳು ಜೀವ ತಳೆಯುತ್ತವೆ. ಅಷ್ಟೊಂದು ಮುಗ್ಧತೆ ಬಿಂಬಿಸುವ ಅಗತ್ಯ ಏನಿದೆ?

ಜಾನಕಿ ಓರಗಿತ್ತಿ ನಂದಿತಾಳ ನರಿಬುದ್ಧಿ ನೋಡಲು ಹಿಂಸೆಯಾಗುತ್ತದೆ. ಮನೆಗೊಬ್ಬರು ಇಂತಹವರು ಇದ್ದು ಬಿಟ್ಟರೆ ಮನೆಯೊಂದು ಮೂರು ಬಾಗಿಲು. ಇಂತವರನ್ನು ನೋಡಿಯೇ ಕಥೆ ಬರೆದಿರುತ್ತಾರೋ? ಅಥವಾ ಇಂಥವರನ್ನು ನೋಡಿಯೇ ಕಲಿಯುತ್ತಿದ್ದಾರೋ? ಧಾರಾವಾಹಿಗಳಿಗೆ ಮನೆ ಮನೆಗಳಲ್ಲಿ ನಡೆಯುವ ರಾದ್ಧಾಂತಕ್ಕೂ ಕರುಳುಬಳ್ಳಿ ಸಂಬಂಧವೇನೋ ಎನ್ನುವಷ್ಟು ಸಾಮ್ಯತೆ ತೋರಿ ಬರುತ್ತಿದೆ.

—ರತ್ನಾ ಅಶೋಕ ಗೊರವರ

## ಅರ್ಥಪೂರ್ಣ ಭಾವಧಾರೆ

ದಿಗ್ವಿಜಯದಲ್ಲಿ ಕೃಷ್ಣೇಗೌಡರ ನಡೆಸಿಕೊಡುವ ಭಾವಧಾರೆ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿದೆ. ಭಾವಗೀತೆ, ಜನಪದ ಗೀತೆ ಇತ್ಯಾದಿ ಪ್ರಕಾರಗಳಲ್ಲಿ ಬರುವ ಗೀತೆಯನ್ನು ಪ್ರಸಿದ್ಧ ಗಾಯಕ, ಗಾಯಕಿಯರ ಸಿರಿಕಂಠದಿಂದ ಹೊರ ಹೊಮ್ಮುತ್ತದೆ. ಇದು ಪ್ರಶಂಸನೀಯ. ಆದರೆ ಅವುಗಳ ಹಿನ್ನೆಲೆ, ಅರ್ಥ ವಿಶ್ಲೇಷಣೆ ಮಾಡುವ ಪ್ರೊ. ಕೃಷ್ಣೇಗೌಡರ ಮಾತುಗಾರಿಕೆ ಸ್ವಲ್ಪ ಅತಿಯಾಯಿತೇನೋ ಅನ್ನಿಸುತ್ತದೆ.

—ಬಿ.ಆರ್. ನಾಗರತ್ನ, ಮೈಸೂರು

## ನೀರಸ ಸುಬ್ಬಲಕ್ಷ್ಮಿ

ಝೀನ 'ಸುಬ್ಬಲಕ್ಷ್ಮಿ ಸಂಸಾರ' ಅತೀ ನೀರಸ ಹಾಗೂ ಬೇಸರ ತರುವಂತೆ, ಒಂದು ನಿರ್ದಿಷ್ಟ ಗುರಿಯಿಲ್ಲದಂತೆ ಸಾಗುತಿದೆ. ಮದುವೆಯಾಗಿ ಎಂಟು ವರ್ಷ ಕಳೆದರೂ, ನಗರ ಜೀವನ ಶೈಲಿಗೆ ಹೊಂದಿಕೊಳ್ಳದೆ 'ಮಾವ, ಮಾವ' ಅಂತ ಮೇಕೆಯಂತೆ ಮಾತನಾಡುವ ಸುಬ್ಬಲಕ್ಷ್ಮಿ ಬಗ್ಗೆ ಅನುಕಂಪ ತೋರುವ ಬದಲು, ಅವಳ ಹಿತೈಷಿಗಳು ಅವಳಿಗೆ ಸ್ವಾವಲಂಬಿ ಬದುಕು ನಡೆಸುವ ಮಾರ್ಗ ತೋರಿಸಲಿ.

—ಬಿ.ಮಧುಪ್ರಿಯಾ

## ಇಂದಿನ ಧಾರಾವಾಹಿಗಳು

ವರ್ಷಗಳು ಉರುಳಿದರೂ ಮುಕ್ತಾಯ ಕಾಣದ ಧಾರವಾಹಿಗಳನ್ನು ಮಾಡುವುದಕ್ಕೆ ನಿರ್ಮಾಪಕ, ನಿರ್ದೇಶಕರು ಹೆಣಗಾಡುತ್ತಿದ್ದಾರೆ. ಏನೇನೋ ತಿರುವುಗಳನ್ನು ತಂದಾಯಿತು. ದ್ವೇಷ, ಸೇಡು, ಕೊಲೆ ಪ್ರಯತ್ನ ಮಾಡುವ, ವಿಷಕಾರುವ, ದೆವ್ವ ಭೂತಗಳ ಪಾತ್ರಗಳನ್ನು ಸೃಷ್ಟಿಸಿದ್ದಾಯಿತು. ಈಗ ವಿಷ ಸರ್ಪ, ದೇವ್ವಗಳನ್ನೇ, ನೇರವಾಗಿ ತಂದಿದ್ದಾರೆ. ಮನುಷ್ಯರ ಜೊತೆಜೊತೆಗೆ ಅವುಗಳ ಪಾತ್ರವೂ ಮುಖ್ಯವೆಂಬಂತೆ ಕಥೆ ಹೆಣೆದು ನಂಬಲಾಗದ ಸನ್ನಿವೇಶಗಳನ್ನೇ ಸೃಷ್ಟಿಸಲಾಗುತ್ತಿದೆ. ಮನರಂಜನೆಗೆ ಬದಲಾಗಿ ನೋಡುವುದಕ್ಕೆ ಭಯವಾಗುವಂತೆ ಮಾಡುತ್ತಿದ್ದಾರೆ. ಏಕೆ? ನಮ್ಮಲ್ಲಿ ಒಳ್ಳೆಯ ಕಥೆಗಳಿಲ್ಲವೆ? ಉತ್ತಮ ಮಟ್ಟದ ಕಥೆಗಾರರಿಲ್ಲವೆ?

—ಶ್ರೀನಾಥ್ ಕೊನೇಟಿ, ಬೆಂಗಳೂರು

## ಪಾಕ್ಷಿಕ ಕಿನ್ನರಿ

ನಿಂತಲ್ಲೇ ನಿಂತು ವಾರಕ್ಕೊಮ್ಮೆ ಅಥವಾ ಹದಿನೈದು ದಿನಕ್ಕೊಮ್ಮೆ ನೋಡಬಹುದು ಎನ್ನುವ 'ಕಿನ್ನರಿ' ಧಾರವಾಹಿಗೆ ನಿರ್ದೇಶಕ ಒಳ್ಳೆಯ ಪತ್ತೇದಾರಿ ಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸತ್ತು ಹೋದಳೆಂದು ತಿಳಿದಿದ್ದ ನಿತ್ಯ ಅವರ ಶೋಧಕ್ಕೆ ಮಣಿ ಮತ್ತು ಇಂಗ್ಲಿಷ್ ಟೀಚರ್ ಬಳಸುತ್ತಿರುವುದು ವೀಕ್ಷಕರಲ್ಲಿ ಕುತೂಹಲ ಮೂಡಿಸಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ